97730

## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2115
ಸದಸ್ಯರ ಹೆಸರು : ಶ್ರೀ ಶರಣಗೌಡ ಬಯ್ಯಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 17.03.2022
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಪ್ರಶ್ನೆ | ಉತ್ತರ |
|---|---|
| ಅ) ರಾಜ್ಯ ಸರ್ಕಾರಿ ಅಧಿಕಾರಿ/ನೌಕರರುಗಳ ಮುಂಬಡ್ತಿ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಹೊರಡಿಸಿರುವ ಸ್ಪಷ್ಟ ಮಾರ್ಗಸೂಚಿಗಳೇನು; (ವಿವರ ನೀಡುವುದು) | ರಾಜ್ಯ ಸಿವಿಲ್ ಸೇವೆಗಳಲ್ಲಿನಹುದ್ದೆಗಳಿಗೆ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಮುಂಬಡ್ತಿ ನೀಡುವಾಗ ಅನುಸರಿಸಬೇಕಾದ ಕಾರ್ಯವಿಧಾನದ ಬಗ್ಗೆ ದಿನಾಂಕ 9.10.1985ರ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 5 ಎಸ್‌ಆರ್‌ಎಸ್ 84ರಲ್ಲಿ ಮಾರ್ಗಸೂಚನೆಗಳನ್ನು ನೀಡಲಾಗಿದೆ.<br><br>2.ಇಲಾಖಾ ವಿಚಾರಣೆ / ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿರುವ ಸರ್ಕಾರಿ ನೌಕರರನ್ನು ಮುಂಬಡ್ತಿಗೆ ಪರಿಗಣಿಸಿದಾಗ ಅನುಸರಿಸಬೇಕಾದ ಕಾರ್ಯ ವಿಧಾನವನ್ನು ದಿನಾಂಕ 14.7.1993ರ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 22 ಎಸ್‌ಆರ್‌ಆರ್ 93ರಲ್ಲಿ ವಿವರಿಸಲಾಗಿದೆ.<br><br>3.ಸರ್ಕಾರಿ ನೌಕರನ ವಿರುದ್ಧ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆ ಪ್ರಾರಂಭವಾಗಿ, ಅಂತಹ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆಗಳು ದಂಡನೆಯಲ್ಲಿ ಪರ್ಯಾವಸಾನಗೊಂಡಲ್ಲಿ ಆ ದಂಡನೆಯು ಜಾರಿಯಲ್ಲಿರುವ ಅವಧಿಯಲ್ಲಿ ಅಂತಹ ಸರ್ಕಾರಿ ನೌಕರರಿಗೆ ಮುಂಬಡ್ತಿ ನೀಡಲು ಆಸ್ಪದವಿಲ್ಲವೆಂದು ದಿನಾಂಕ:02.05.2001ರ ಸುತ್ತೋಲೆ ಸಂಖ್ಯೆ:ಸಿಆಸುಇ 12 ಸೆಸೆನಿ 2001ರಲ್ಲಿ ಸೂಚನೆಗಳನ್ನು ನೀಡಲಾಗಿದೆ.<br><br>4.ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 3ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಗಳು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತವೆ. ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ನಿಯಮಗಳು, 1978ರ ನಿಯಮ 2ರಲ್ಲಿ ಪೂರ್ವಾನ್ವಯ ಮುಂಬಡ್ತಿ ನೀಡುವ ಪ್ರಕರಣಗಳನ್ನು ವಿವರಿಸಲಾಗಿರುತ್ತದೆ.<br><br>5. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 1977 ದಿನಾಂಕ: **27.04.1978** ದಿನಾಂಕ: **01.06.1978**ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮುಂಬಡ್ತಿಯಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ **21** ಎಸ್‌ಬಿಸಿ **97** ದಿನಾಂಕ: **03.02.1999** ಮತ್ತು **13.04.1999**ರ ಆದೇಶದಲ್ಲಿ ಮಾರ್ಗಸೂಚನೆಗಳನ್ನು ನೀಡಲಾಗಿರುತ್ತದೆ |



Generated from eOffice by G JAGADEESHA, CMO-JS(GJ), JOINT SECRETARY, CMO on 15/03/2022 03:42 PM

| | |
|---|---|
| ಆ)ಮುಂಬಡ್ತಿಗೆ ಅನುಸರಿಸುವ ಸಂದರ್ಭದಲ್ಲಿ ರೋಸ್ಟರ್ ಬಿಂದು ಹಾಗೂ ಪ್ರಾತಿನಿಧ್ಯ ವಿಷಯದಲ್ಲಿ ಇನ್ನೂ ಕೆಲವು ಇಲಾಖೆಗಳಲ್ಲಿ ಗೊಂದಲವಿರುವುದು ನಿಜವೇ; ಇದಕ್ಕೆ ಸಂಬಂಧಿಸಿದಂತೆ ಡಿಪಿಎಆರ್ ನಿಂದ ನೀಡಿರುವ ಸ್ಪಷ್ಟೀಕರಣವೇನು; (ವಿವರ ನೀಡುವುದು) | ಇಲ್ಲ |
| ಇ)ಆರ್ಥಿಕ ಇಲಾಖೆಯಡಿಯಲ್ಲಿ ಬರುವ ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆಯಲ್ಲಿ ಕ್ರಮ ಸಂಖ್ಯೆ 2ರ ವಿಷಯದಲ್ಲಿ ಗೊಂದಲವಿದ್ದರೂ, ಗೊಂದಲ ನಿವಾರಣೆ ಸಂಬಂಧದಲ್ಲಿ ಸಿಆಸುಇ ಯಿಂದ ಸ್ಪಷ್ಟೀಕರಣ ಪಡೆದು ಮುಂಬಡ್ತಿ ಪ್ರಕ್ರಿಯೆಗಳನ್ನು ಪ್ರಾರಂಭಿಸಿರುವರೇ; (ಮಾಹಿತಿ ನೀಡುವುದು) | ಸಿ.ಆ.ಸು ಇಲಾಖೆಯಿಂದ ಸ್ಪಷ್ಟೀಕರಣವನ್ನು ಪಡೆಯಲಾಗಿದೆ. ಅದನ್ನು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ ಋಣ ನಿರ್ವಹಣೆ ಇಲಾಖೆಗೆ ಕಳುಹಿಸಿ, ಅದರಂತೆ ಪರಿಶೀಲಿಸಿ ಮುಂಬಡ್ತಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ. |
| ಈ)ಇಲ್ಲದಿದ್ದಲ್ಲಿ, ಈ ಬಗ್ಗೆ ಗೊಂದಲ ನಿವಾರಣೆ ಮಾಡಿಕೊಂಡ ನಂತರ ಮುಂಬಡ್ತಿ ಪ್ರಕ್ರಿಯೆಗಳಿಗೆ ಚಾಲನೆ ನೀಡಲು ಸರ್ಕಾರವು ಇಲಾಖೆಗೆ ನಿರ್ದೇಶನ ನೀಡಲಾಗಿದೆಯೇ; ನೀಡಿದ್ದಲ್ಲಿ, ಕೈಗೊಂಡ ಕ್ರಮದ ವಿವರಗಳನ್ನು ನೀಡುವುದು? (ಸಂಪೂರ್ಣ ಮಾಹಿತಿ ನೀಡುವುದು) | |

ಸಿಆಸುಇ 73 ಸೇನೆನಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ